**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನಾ.ದ. ಭದ್ರಾವತಿ**

**ಸಿ.ಸಿ ನಂಃ 6679/2024**

ಚಾ.ಸಾಃ 1 ಪ್ರಾ.ಸಾಃ 1

| | | |
|---|---|---|
| ಹೆಸರು | : | ಪಾರ್ವತಮ್ಮ |
| ತಂದೆಯ ಹೆಸರು | : | ಚನ್ನವೀರಪ್ಪ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಅಗರದಹಳ್ಳಿ |

**ದಿನಾಂಕಃ 03.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿಯವರಿಂದಃ**

ನನಗೆ ಚಾ.ಸಾ–2, 3, 4 ರವರ ಪರಿಚಯ ಇದೆ. ಆರೋಪಿ ನನ್ನ ಮಗ.

ಆರೋಪಿತರು ನನ್ನ ಮನೆಯ ಹತ್ತಿರ ಬಂದು ನನಗೆ ಕಿಟಕಿಯಿಂದ ಕೋಲು ಹಾಕಿ ತಿವಿದು ಕೋಲಿನಿಂದ ಹೊಡೆದು ಮೈಕೈ ಗೆ ನೋವುಂಟುಮಾಡಿ ಜೀವ ಬೆದರಿಕೆ ಹಾಕಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಹೇಳಿಕೆ ದೂರು ಆಗಿದ್ದು ಅದನ್ನು ನಿಪಿ–1 ಎಂದು ಸಾಕ್ಷಿಯ ಸಹಿಯನ್ನು ನಿಪಿ–1 ಎ ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ ಅದು ಸ್ಥಳ ಪಂಚನಾಮೆ ಯಾಗಿದ್ದು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–2 ಎಂದು ಸಾಕ್ಷಿಯ ಸಹಿಯನ್ನು ನಿಪಿ–2 ಎ ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ ಅದು ಕಚ್ಚಾ ನಕಾಶೆ ಯಾಗಿದ್ದು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–3 ಎಂದು ಸಾಕ್ಷಿಯ ಸಹಿಯನ್ನು ನಿಪಿ–3 ಎ ಎಂದು ಗುರುತಿಸಲಾಯಿತು.

ನಿಪಿ–1 ಮತ್ತು ನಿಪಿ–2 ರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಮಹಜರನ್ನು ತಯಾರಿಸಿರುವುದಿಲ್ಲ. ಪೋಲೀಸರ ಕೋರಿಕೆ ಮೇರೆಗೆ ನಿಪಿ–1 ಮತ್ತು ನಿಪಿ–2 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ.

**(ಈ ಸಂದರ್ಭದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕಃ 05.05.2024 ರಂದುರಾತ್ರಿ 1.00 ಗಂಟೆಗೆ ಅಗರದಹಳ್ಳಿ ಗ್ರಾಮದಲ್ಲಿರುವ ನನ್ನ ಮನೆಯಲ್ಲಿ ನಾನು ಮಲಗಿದ್ದಾಗ ಆರೋಪಿತನು ಕಿಟಕಿಯಿಂದ ಕೋಲು ಹಾಕಿ ಕೋಲಿನಿಂದ ತಿವಿದು ನನ್ನ ಮೈಕೈಗೆ ನೊವುಂಟುಮಾಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿತನು ನನಗೆ ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಿಪಿ–1 ರಂತೆ ನಾನು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 13.05.2024 ರಂದು ಘಟನಾ ಸ್ಥಳಕ್ಕೆ ಪೋಲೀಸರು ಬಂದು ಚಾಸಾ–3 ಮತ್ತು 4 ರವರ ಸಮಕ್ಷಮ ನಾನು ಸ್ಥಳ ತೋರಿಸಿದ ಮೇರೆಗೆ ಬೆಳಗ್ಗೆ 10.00 ರಿಂದ 10.45 ಗಂಟೆವರೆಗೆ ನಿಪಿ–2 ರಂತೆ ಪಂಚನಾಮೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ನಿಪಿ–3 ರಂತೆ ಕಚ್ಚಾ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ನಾನು

ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆದ ಕಾರಣ ನಾನು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಮತಿ ಜಿ ಇ ಎಂ ವಕೀಲರಿಂದ**

ಆರೋಪಿ ಪರ ವಕೀಲರು ಏನೂ ಇಲ್ಲ ಎಂದು ನುಡಿದಿರುತ್ತಾರೆ.

(ಮರು ವಿಚಾರಣೆ ಇಲ್ಲ.)
(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ನಾಸಿರಬಾನು)
1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಭದ್ರಾವತಿ.